## ಪ್ರಾರ್ಥನೆ

# ಶ್ರೀವಿವೇಕಾನಂದ ಸುಪ್ರಭಾತಮ್ - ೩

**ನ್ಯಾಸಿನ್ ನರೋತ್ತಮ ಪವಿತ್ರ ನರೇಂದ್ರನಾಥ**
**ಶ್ರೀರಾಮಕೃಷ್ಣಕರುಣಾ ಹಿ ಸದಾ ತ್ವಯಾಪ್ತಾ ।**
**ಸಂನ್ಯಾಸ್ಯಸಿ ತ್ವಮಪಿ ತೇ ಪರದುಃಖಸೇವಾ**
**ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್ ॥ ೯ ॥**

ನರಶ್ರೇಷ್ಠನೇ, ಪವಿತ್ರತಾಸ್ವರೂಪಿಯೇ, ಸಂನ್ಯಾಸಿ ನರೇಂದ್ರ ನಾಥನೆ, ಶ್ರೀರಾಮಕೃಷ್ಣರ ಕರುಣೆಗೆ ಸದಾ ಪಾತ್ರನಾದ ನೀನು ಸಂನ್ಯಾಸಿಯಾಗಿದ್ದರೂ, ದುಃಖಿತರ ಸೇವೆಯಲ್ಲಿ ನಿರತನು. ವಿಶ್ವ ವೀರನೆ, ಶ್ರೇಷ್ಠ ಯತಿಯೆ, ನಿನಗೆ ಸುಪ್ರಭಾತ.

**ಹೇ ಸತ್ಯ ಹೇ ಸಕಲಮೋಹತಮೋವಿನಾಶಿನ್**
**ತೇಜೋಽಸಿ ದೇಹಿ ಸತತಂ ಹ್ಯಮಿತಂ ಸುತೇಜಃ ।**
**ಹೇ ಶ್ರೇಷ್ಠ ಜಾಗರಯ ನಃ ಶಮಭೀರ್ನಿನಾದೈ-**
**ರ್ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್ ॥ ೧೦ ॥**

ಸತ್ಯಸ್ವರೂಪಿಯೆ, ಸಕಲರ ಮೋಹ ಮತ್ತು ಅಜ್ಞಾನವನ್ನು ದೂರ ಮಾಡಿದ ತೇಜೋರೂಪಿ ನೀನು; ನಮಗೆ ಅಮಿತವಾದ ತೇಜಸ್ಸನ್ನು ಕರುಣಿಸು. ನಿನ್ನ 'ಅಭೀಃ' ಎಂಬ ನಾದಘೋಷ ದಿಂದ ನಮ್ಮಲ್ಲಿ ಶಾಂತಿಯನ್ನು ಜಾಗೃತಗೊಳಿಸು. ವಿಶ್ವವೀರನೆ, ಶ್ರೇಷ್ಠ ಯತಿಯೆ, ನಿನಗೆ ಸುಪ್ರಭಾತ.

**ಹೇ ದೇಶಪ್ರೇಮಿಕ ಚ ಜಾತಸುವಿಶ್ವಪ್ರೇಮ**
**ಬ್ರಹ್ಮಜ್ಞ ಹೇ ವಿದಿತಮರ್ಮಸಮಗ್ರವಿಶ್ವ ।**
**ಬ್ರಹ್ಮನ್ ಮಹಾಪುರುಷ ಜಾಗೃಹಿ ದೇವ ನಿತ್ಯಂ**
**ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್ ॥ ೧೧ ॥**

ನೀನು ದೇಶಪ್ರೇಮಿ, ಆದರೂ ಸಂಪೂರ್ಣ ವಿಶ್ವವನ್ನು ಅದೇ ರೀತಿಯಲ್ಲಿ ಪ್ರೀತಿಸಬಲ್ಲ ಬ್ರಹ್ಮಜ್ಞಾನಿ. ಸಂಪೂರ್ಣ ವಿಶ್ವದ ಮರ್ಮವನ್ನರಿತ ಮಹಾತ್ಮ ನೀನು. ಎಲ್ಲರಲ್ಲಿ ಆ ಉದಾರ ಜ್ಞಾನ ವನ್ನು ಸದಾ ಬೆಳಗಿಸು. ವಿಶ್ವವೀರನೆ, ಶ್ರೇಷ್ಠಯತಿಯೆ, ನಿನಗೆ ಸುಪ್ರಭಾತ.

**ನಿಃಸ್ವಾರ್ಥ ಹೇ ಕಮಲನೇತ್ರ ಮಹಾಸಮುದ್ರ**
**ಸ್ನಿಗ್ಧಂ ವಿಶಾಲಹೃದಯಂ ಹಿ ತವೇತಿ ಜಾನೇ ।**
**ಯೋಗ್ಯಾನ್ ನರಾನ್ ಹಿ ಕುರು ನಃ ಸಕಲಾಂಶ್ಚ ಪೃಥ್ವ್ಯಾ**
**ವಿಶ್ವಸ್ಯ ವೀರ ಸುಯತೇ ತವ ಸುಪ್ರಭಾತಮ್ ॥ ೧೨ ॥**

ಸ್ವಾರ್ಥರಹಿತನೆ, ವಿಶಾಲವಾದ ಕಣ್ಣುಗಳುಳ್ಳವನೆ, ನಿನ್ನದು ಸ್ನೇಹಪೂರ್ಣ ವಿಶಾಲ ಹೃದಯ. ಭೂಮಿಯಲ್ಲಿರುವ ಎಲ್ಲ ಮಾನವರನ್ನೂ ಯೋಗ್ಯರನ್ನಾಗಿ ಮಾಡು. ವಿಶ್ವವೀರನೆ, ಶ್ರೇಷ್ಠ ಯತಿಯೆ, ನಿನಗೆ ಸುಪ್ರಭಾತ.

**ಶ್ರೀರಾಮಕೃಷ್ಣಚರಿತೇ ನಿತರಾಂ ಹಿ ಮುಗ್ಧಃ**
**ಶ್ರೀರಾಮಕೃಷ್ಣಮನನೇ ಸ್ಥಿತಧೀಃ ಸದಾ ತ್ವಮ್ ।**
**ಶ್ರೀರಾಮಕೃಷ್ಣಭಜನೇಷು ಮುದಸ್ತ್ವಯಾಪ್ತಾಃ**
**ಶ್ರೀರಾಮಕೃಷ್ಣಮಯ ಹೇ ತವ ಸುಪ್ರಭಾತಮ್ ॥ ೧೩ ॥**

ಶ್ರೀರಾಮಕೃಷ್ಣರ ಲೀಲೆಯಲ್ಲಿ ಸಮರ್ಪಿತನಾದ ನೀನು ಶ್ರೀರಾಮಕೃಷ್ಣರ ಮನನದಲ್ಲೇ ನಿನ್ನ ಮನಸ್ಸುಬುದ್ಧಿ ನಿಲ್ಲಿಸಿಬಿಟ್ಟಿ ರುವೆ. ಶ್ರೀರಾಮಕೃಷ್ಣರ ಭಜನಾನಂದದಲ್ಲಿ ನಿನ್ನನ್ನೇ ನೀನು ಮರೆತೆ. ಅಂತಹ ಶ್ರೀರಾಮಕೃಷ್ಣಮಯನಾದ ನಿನಗೆ ಸುಪ್ರಭಾತ.

**ರಾಮಕೃಷ್ಣಪದಾಂಭೋಜೇ ಭೃಂಗಾಯತೇ ಹಿ ಯಃ ಸದಾ।**
**ವಂದೇಽಹಂ ಸ್ವಾಮಿನಂ ಭಕ್ತ್ಯಾ ವಿವೇಕಾನಂದಸಂಜ್ಞಿತಮ್ ॥**

ಶ್ರೀರಾಮಕೃಷ್ಣರ ಪದಕಮಲಗಳಲ್ಲಿ ಸದಾ ದುಂಬಿಯಾಗಿ ನೆಲೆಸಿರುವ ವಿವೇಕಾನಂದ ಸ್ವಾಮಿಯನ್ನು ಭಕ್ತಿಯಿಂದ ನಮಿ ಸುವೆ.

— ಸ್ವಾಮಿ ಜೀವಾನಂದ

## ಸೂಕ್ತಿಪ್ರಭ

# ವಿವಿಧ ಸೂಕ್ತಿಗಳು

**ಕೇ**ವಲ ಒಳ್ಳೆಯ ಮನಸ್ಸಿದ್ದರೆ ಸಾಲದು; ಅದನ್ನು ಚೆನ್ನಾಗಿ ಬಳಸಿಕೊಳ್ಳುವುದೇ ಅತ್ಯಂತ ಮುಖ್ಯವಾದ ಸಂಗತಿ.

— ರೆನೆ ಡೆಕಾರ್ಟೆ

**ಎ**ಲ್ಲರಿಗೂ ಯಾವುದು ಒಳ್ಳೆಯದೋ, ಯಾರು - ಎಂಥ ವನೇ ಆಗಲಿ, ಪ್ರತಿಯೊಬ್ಬನಿಗೂ ಯಾವುದು ಒಳ್ಳೆಯದೋ, ಅದೇ ನನಗೆ ಒಳ್ಳೆಯದು. ನನಗೆ ಯಾವುದು ಒಳ್ಳೆಯದು ಎಂದು ನಾನು ಅದನ್ನು ಹಿಡಿದಿಟ್ಟುಕೊಂಡಿರುವೆನೋ ಅದನ್ನೇ ಎಲ್ಲರಿಗೂ ಹಿಡಿದಿಟ್ಟುಕೊಳ್ಳಬೇಕು. ವಿಶ್ವಮಾನ್ಯ ನಿಯಮವೇ ನಿಜವಾದ ನಿಯಮ.

— ಝುರತುಷ್ಟ್ರ

**ಮಾ**ನವನ ಜೀವನದಲ್ಲಿ ಅತ್ಯುತ್ತಮ ಸಮಯವೆಂದರೆ, ಅವನ - ಹೆಸರಿಲ್ಲದ, ಯಾರೂ ನೆನಪಿಸಿಕೊಳ್ಳದ - ಕರುಣೆ ಹಾಗೂ ಪ್ರೀತಿಯ ನಡತೆಗಳು.

— ವಿಲಿಯಂ ವರ್ಡ್ಸ್‌ವರ್ತ್

**ಕು**ಲದ ಹಿತಕ್ಕಾಗಿ ಒಬ್ಬ ಮನುಷ್ಯನನ್ನೂ, ಗ್ರಾಮಕ್ಕಾಗಿ ಕುಲವನ್ನೂ, ರಾಷ್ಟ್ರಕ್ಕಾಗಿ ಗ್ರಾಮವನ್ನೂ ತ್ಯಜಿಸಬಹುದು. ಆತ್ಮನಿಗಾಗಿ ಜಗತ್ತನ್ನೇ ತ್ಯಜಿಸಬೇಕು.

—ಮಹಾಭಾರತ